**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 04-08-2022.**

**ಪಾಟೀ ಸವಾಲು ಪ್ರತಿವಾದಿ ನಂ.8 ರವರ ಪರ ಶ್ರೀ ಹೆಚ್.ಆರ್.ಎಸ್. ವಕೀಲರಿಂದ :**

**1)** ಈ ದಾವೆ ನಡೆಸಲು ನನಗೆ ರಾಮಾಂಜಿನಪ್ಪ ಜಿ.ಪಿ.ಎ. ನೀಡಿದ್ದಾರೆ. ನಾವು 4 ಜನರ ಪರವಾಗಿ ಈ ಕೇಸು ನಡೆಸುತ್ತಿದ್ದೇವೆ. ಈ ಪ್ರಕರಣದ ಬಗ್ಗೆ ನನಗೆ ಪೂರ್ತಿ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ತಾತನ ಹೆಸರು ಮುನಿನರಸಪ್ಪ. ಆತನಿಗೆ 5 ಜನ ಗಂಡುಮಕ್ಕಳು. ಅವರುಗಳೇಂದರೆ ಚಿಕ್ಕಆಂಜಿನಪ್ಪ, ಕಾಳಪ್ಪ, ಚಿಕ್ಕಣ್ಣ, ಮುನಯ್ಯ ಮತ್ತು ಪೂಜಯ್ಯ. ಹೆಣ್ಣುಮಕ್ಕಳು - ಕಾಳಮ್ಮ ಮತ್ತು ಮುನಿಯಮ್ಮ. 4 ಜನಕ್ಕೆ ಭಾಗ ಬೇಕು ಎಂದು ಈ ದಾವೆ ಹಾಕಿದ್ದೇವೆ. ದಾವಾ ಆಸ್ತಿ ಮೂಲತಃ ನಮ್ಮ ತಾತನ ಆಸ್ತಿ. ಅದರಲ್ಲಿ ಹೆಣ್ಣುಮಕ್ಕಳಿಗೆ ಭಾಗ ಇದೆ ಎಂದರೆ ಸರಿ. ಉದ್ದೇಶಪೂರ್ವಕವಾಗಿ ನಾವು ಹೆಣ್ಣುಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

**2)** ಈ ದಾವೆಯನ್ನು ಮೊದಲು ನಮ್ಮ ಬೇರೆ ವಕೀಲರು ತಯಾರಿಸಿರುತ್ತಾರೆ. ಅವರ ಹೆಸರು ಬಿ.ಎಂ. ಬೈರೇಗೌಡ. ಈಗ ಗೋವಿಂದರಾಜು ಎಂಬ ವಕೀಲರು ನಡೆಸುತ್ತಿದ್ದಾರೆ.

**3)** ನಮ್ಮ ತಾತ ಮತ್ತು ತಂದೆ ಬದುಕಿದ್ದಾಗ ದಾವಾ ಆಸ್ತಿಯ ಮೇಲೆ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ಸಾಲ ಪಡೆದಿದ್ದರು ಎಂದರೆ ಸರಿ. ಸದರಿ ಸಾಲವನ್ನು ಕಾಳಮ್ಮ ತೀರಿಸಿದ್ದರು ಎಂದರೆ ಸರಿ. ಸಾಕ್ಷಿಯು ನಾವು ಕಾಳಮ್ಮನಿಗೆ ಹಣ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಸದರಿ ಕಾಳಮ್ಮನಿಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದು ಅವರು ದಾವೆ ಸಂಖ್ಯೆ : 77/1986, 78/1986, 85/1986, 86/1986 ಮತ್ತು 180/1985 - ದಾವೆ ಹಾಕಿದ್ದರು ಎಂದರೆ ಸರಿ. ಸದರಿ ದಾವೆಗಳು

ಕಾಳಮ್ಮನ ಪರವಾಗಿ ಡಿಕ್ರಿ ಆಯಿತು ಎಂದರೆ ಸರಿ. ನಾವು ಕಾಳಮ್ಮನಿಗೆ ಹಣ ನೀಡಿದ್ದೇವೆ ಎಂದು ಹೇಳುತ್ತಾರೆ. ಸದರಿ ಕೇಸುಗಳನ್ನು ಶ್ರೀ ಬಿ.ಎಂ. ಬೈರೇಗೌಡ, ವಕೀಲರೇ ಕಾಳಮ್ಮನ ಪರವಾಗಿ ನಡೆಸಿದ್ದರು ಎಂದರೆ ಸಾಕ್ಷಿಯು ನಿಖರವಾದ ಉತ್ತರ ನೀಡಿರುವುದಿಲ್ಲ. ಸದರಿ ಆಸ್ತಿಗಳಲ್ಲಿ ಕಾಳಮ್ಮನೇ ಸ್ವಾಧೀನದಲ್ಲಿದ್ದು ಈಗ 8 ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಂತರ ಕಾಳಮ್ಮ ದಾವೆ ಸಂಖ್ಯೆ : 383/1997 ದಾವೆ ಹಾಕಿದ್ದಳು ಎಂದರೆ ಸರಿ. ಆ ದಾವೆಯನ್ನು ಸದರಿ ಬೈರೇಗೌಡ, ವಕೀಲರು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನಿಖರವಾದ ಉತ್ತರ ನೀಡಿರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ಕಾಣಿಸಿದ ಮೇಲೆ ಸದರಿ ವಕೀಲರು ನಮಗೆ ಎನ್.ಓ.ಸಿ. ನೀಡಿದ್ದರು ಎಂದರೆ ಸಾಕ್ಷಿಯು ನಿಖರವಾದ ಉತ್ತರ ನೀಡಿರುವುದಿಲ್ಲ. ಸದರಿ ವಕೀಲರ ಮೇಲೆ ಪಿರ್ಯಾದಿ ಸಂಖ್ಯೆ : 33/2009 ರಾಜ್ಯ ವಕೀಲರ ಪರಿಷತ್ತಿನಲ್ಲಿ ದಾಖಲಿಸಿದ್ದಾರೆ ಎಂದರೆ ಗೊತ್ತಿಲ್ಲ. ನಾವು ಮತ್ತು ಸದರಿ ವಕೀಲರು ಸೇರಿ ಈ ದಾವೆಯನ್ನು ಕಾಳಮ್ಮ ಮತ್ತು ಅವರ ಮಕ್ಕಳಿಗೆ ತೊಂದರೆ ಕೊಡಲು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**4)** ಚಿಕ್ಕಆಂಜಿನಪ್ಪನ ಮಕ್ಕಳನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿ ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿ. ಕಾಳಮ್ಮನ ಪರವಾಗಿ ಡಿಕ್ರಿ ಆಗಿದ್ದರೂ ಮತ್ತು ಅವರು ಪೂರ್ತಿ ಹಣ ನೀಡಿದ್ದರೂ ಅವರನ್ನು ಪಕ್ಷಗಾರರನ್ನಾಗಿ ಮಾಡದೇ ಅವರಿಗೆ ಮೋಸ ಮಾಡಲು ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**5)** ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಗಳು ಪರ ವಕೀಲರು ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**